ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮೊಬೈಲ್ : 9448279006
ದೂರವಾಣಿ: 0816-2278599
ಇ-ಮೇಲ್:setumkur@bescom.co.in
ಇ-ಮೇಲ್:setmkrcircle.work@gmail.com

ಅಧೀಕ್ಷಕ ಇಂಜಿನಿಯರ್(ವಿ)ರವರ ಕಛೇರಿ,
ವಾಣಿಜ್ಯ, ಕಾರ್ಯ ಮತ್ತು ಪಾಲನ ವೃತ್ತ,
ಬೆವಿಕಂ, ತುಮಕೂರು ಜಿಲ್ಲೆ,
ಹೊರಪೇಟೆ, ತುಮಕೂರು-572101.

ಸಂಖ್ಯೆ: ಅಇಂ(ವಿ)/ಕಾನಿಇಂ(ಕ)/ಸಕಾನಿಇಂ(ಕ)/ಟಿ1/2024-25/ 7390-92 ದಿನಾಂಕ: 07 DEC 2024

ಲಗತ್ತು:-

ಗೆ,

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಬೆವಿಕಂ, ವಾ,ಕಾ ಮತ್ತು ಪಾ ವಿಭಾಗ,
ತುಮಕೂರು.

ಮಾನ್ಯರೇ,

ವಿಷಯ:-ತುಮಕೂರು ವಿಭಾಗದ ತುಮಕೂರು ಗ್ರಾಮೀಣ ಉಪವಿಭಾಗ-1, ಕೋರ ಶಾಖಾ ವ್ಯಾಪ್ತಿಯ ಕೆಐಎಡಿಬಿ ಕೈಗಾರಿಕಾ ಪ್ರದೇಶದ ಮೂರನೇ ಹಂತದ ಜಪಾನೀಸ್ ಪಾರ್ಕ್‌ನ ಪ್ಲಾಟ್ ನಂ: 32, 33, 31 ಮತ್ತು 35 ರಲ್ಲಿರುವ ಮೆ॥ ಹಿಟಾಚಿ ಆಸ್ಟಿಮೋ ಹರಿಯಾಣ ಪ್ರೈವೇಟ್ ಲಿಮಿಟೆಡ್, (ಈ ಹಿಂದೆ ಇದ್ದಂತಹ ಮೆ॥ ಶೋವಾ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಫರೀದಾಬಾದ್, ಪರಿಯಾಣ) ರವರ ಆಟೋಮೊಬೈಲ್ ಭಾಗಗಳ ತಯಾರಿಕಾ ಉದ್ದಿಮೆಗೆ 2000 ಕೆವಿಎ ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡಿರುವ ಕುರಿತು.

ಉಲ್ಲೇಖ:- 1) ತಮ್ಮ ಕಛೇರಿ ಪತ್ರ ಸಂಖ್ಯೆ:ಕಾನಿಇಂ(ವಿ)/ಸಕಾನಿಇಂ(ಕ)/ಸಇಂ-1/2021-22/866-67/ ದಿನಾಂಕ:21.09.2021.

2) ಈ ಕಛೇರಿ ಪತ್ರ ಸಂಖ್ಯೆ:2021-22/2027-29/ದಿನಾಂಕ:26.09.2021.

3) ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರ ಸೂಚನಾ ಪತ್ರ ಸಂಖ್ಯೆ: 2021-22/4749-52/ದಿನಾಂಕ:28.09.2021.

4) ತಮ್ಮ ಕಛೇರಿ ಹಣ ಪಾವತಿ ಧೃಢೀಕರಣ ಪತ್ರ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ)/ಸಇಂ-1/2021-22/1215-17/ದಿನಾಂಕ:25.11.2021.

5) ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರ ಅನುಮೋದನಾ ಪತ್ರ ಸಂಖ್ಯೆ:2021-22/6589-591/ದಿನಾಂಕ:08.12.2021.

6) ಈ ಕಛೇರಿ ಅನುಮೋದನಾ ಪತ್ರ ಸಂಖ್ಯೆ:2021-22/6070-72/ದಿನಾಂಕ:09.12.2021.

7) ತಮ್ಮ ಕಛೇರಿ ಸೂಚನಾ ಪತ್ರ ಸಂಖ್ಯೆ:2021-22/13564-67/ದಿನಾಂಕ:09.12.2021.

8) ತಮ್ಮ ಕಛೇರಿ ಕೆಲಸ ಕಾರ್ಯಗತಗೊಳಿಸುವ ಪ್ರಮಾಣ ಪತ್ರ (Work Execution Certificate) ಸಂಖ್ಯೆ: 2021-22/13943-46/ದಿನಾಂಕ:17.12.2021.

9) ತಮ್ಮ ಕಛೇರಿ ಪತ್ರ ಸಂಖ್ಯೆ:ಕಾನಿಇಂ(ವಿ)/ಸಕಾನಿಇಂ(ಕ)/ಸಇಂ-1/2022-23/332-34/ ದಿನಾಂಕ:14.06.2022.

10) ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರ ಅನುಮೋದನಾ ಪತ್ರ ಸಂಖ್ಯೆ:2022-23/1981-82/ದಿನಾಂಕ:16.06.2022.(1000ಕೆವಿಎ ಭಾಗಶಃ ವಿದ್ಯುತ್ ಸಂಪರ್ಕಕ್ಕಾಗಿ).

11) ಈ ಕಛೇರಿ ಅನುಮೋದನಾ ಪತ್ರ ಸಂಖ್ಯೆ:2022-23/1784-85/ದಿನಾಂಕ:18.06.2022. (1000ಕೆವಿಎ ಭಾಗಶಃ ವಿದ್ಯುತ್ ಸಂಪರ್ಕಕ್ಕಾಗಿ).

12) ಗ್ರಾಹಕರ ಕೋರಿಕೆ ದಿನಾಂಕ:01.07.2024 (2000ಕೆವಿಎ ವಿದ್ಯುತ್ ಸಂಪರ್ಕಕ್ಕಾಗಿ).

13) ತಮ್ಮ ಕಛೇರಿ ಪತ್ರ ಸಂಖ್ಯೆ:ಕಾನಿಇಂ(ವಿ)/ಸಕಾನಿಇಂ(ಕ)/ಸಇಂ-1/2024-25/2577-79/ ದಿನಾಂಕ:30.11.2024. (2000ಕೆವಿಎ ವಿದ್ಯುತ್ ಸಂಪರ್ಕಕ್ಕಾಗಿ).

14) ಈ ಕಛೇರಿ ಪತ್ರ ಸಂಖ್ಯೆ:ಕಾನಿಇಂ(ವಿ)/ಸಕಾನಿಇಂ(ಕ)/ಸಇಂ-1/2024-25/2419-20/ ದಿನಾಂಕ:30.11.2024. (2000ಕೆವಿಎ ವಿದ್ಯುತ್ ಸಂಪರ್ಕಕ್ಕಾಗಿ).

15) ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರ ಅನುಮೋದನಾ ಪತ್ರ ಸಂಖ್ಯೆ:2024-25/8774-775/ದಿನಾಂಕ:05.12.2024(2000ಕೆವಿಎ ವಿದ್ಯುತ್ ಸಂಪರ್ಕಕ್ಕಾಗಿ).

(ಪು.ತಿ.ನೋ)...

O & M ಇಂಜಿನಿಯರ್(ವಿ)ರವರ ಕಛೇರಿ ಸಂ.1982 ದಿನಾಂಕ 7/12/24 ತುಮಕೂರು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ರವರು ಉಲ್ಲೇಖ-(5) ರಲ್ಲಿ ಮತ್ತು ಉಲ್ಲೇಖ ಪತ್ರ-(6) ರಲ್ಲಿ ಈ ಕಛೇರಿ ತುಮಕೂರು ವಿಭಾಗದ ತುಮಕೂರು ವಿಭಾಗದ ಗ್ರಾಮೀಣ ಉಪವಿಭಾಗ-1, ಕೋರ ಶಾಖಾ ವ್ಯಾಪ್ತಿಯ ವಸಂತನರಸಾಪುರ ಕೆಐಎಡಿಬಿ ಕೈಗಾರಿಕಾ ಪ್ರದೇಶದ ಮೂರನೇ ಹಂತದ ಜಪಾನೀಸ್ ಪಾರ್ಕ್‌ನ ಪ್ಲಾಟ್ ನಂ: 32, 33, 34 ಮತ್ತು 35 ರಲ್ಲಿರುವ ಮೆ|| ಶೋವಾ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಫರೀದಾಬಾದ್, ಹರಿಯಾಣ ರವರ ಆಟೋಮೊಬೈಲ್ ಭಾಗಗಳ ತಯಾರಿಕಾ ಉದ್ದಿಮೆಗೆ 2000 ಕೆವಿಎ ವಿದ್ಯುತ್ ಹೊರೆಯಲ್ಲಿ ಭಾಗಶಃ ಹೊರೆಗೆ 220/66/11 ಕೆವಿ ವಸಂತನರಸಾಪುರ ವಿದ್ಯುತ್ ಕೇಂದ್ರದ ಮೇಲೆ ಪ್ರತ್ಯೇಕವಾಗಿ ಹೊಸ ಮಾರ್ಗದ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಪರಿಶೀಲಿಸಲ್ಪಟ್ಟು ಅನುಮೋದನೆ ನೀಡಲಾಗಿತ್ತು.

ನಂತರ, ಅರ್ಜಿದಾರರ ಕೋರಿಕೆಯ ಮೇರೆಗೆ ಹಾಗೂ ಉಲ್ಲೇಖ ಪತ್ರ-(9) ರ ತಮ್ಮ ಕಛೇರಿ ಕೋರಿಕೆಯನ್ವಯ ಉಲ್ಲೇಖ-(10) ಮತ್ತು (11) ರಲ್ಲಿ ಮೆ|| ಶೋವಾ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಫರೀದಾಬಾದ್, ಹರಿಯಾಣ ರವರ ಆಟೋಮೊಬೈಲ್ ಭಾಗಗಳ ತಯಾರಿಕಾ ಉದ್ದಿಮೆಗೆ ಅನುಮೋದನೆಗೊಂಡಿದ್ದ 2000 ಕೆವಿಎ ವಿದ್ಯುತ್ ಹೊರೆಯಲ್ಲಿ ಭಾಗಶಃ 1000 ಕೆವಿಎ ವಿದ್ಯುತ್ ಸಂಪರ್ಕ ಕಲ್ಪಿಸಲು ಪರಿಶೀಲಿಸಲ್ಪಟ್ಟು ಅನುಮೋದನೆ ನೀಡಲಾಗಿತ್ತು.

ಮುಂದುವರೆದು, ಉಲ್ಲೇಖ-(12) ರಲ್ಲಿ ಅರ್ಜಿದಾರರ ಕೋರಿಕೆಯ ಮೇರೆಗೆ ಹಾಗೂ ಉಲ್ಲೇಖ-(13) ರ ತಮ್ಮ ವರದಿಯನ್ವಯ, ಅರ್ಜಿದಾರರು ಬೆವಿಕಂ ಗೆ ಸಂಬಂಧಿಸಿದಂತೆ ಎಲ್ಲಾ ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಪ್ರತ್ಯೇಕ ಬ್ರೇಕರನ್ನು ಅಳವಡಿಸಿಕೊಂಡಿದ್ದು, ವಿದ್ಯುತ್ ಪರಿವೀಕ್ಷಣಾ ಇಲಾಖೆ ಕರ್ನಾಟಕ ಸರ್ಕಾರ ಬೆಂಗಳೂರು ರವರ ಹಾಗೂ ಗುಣಮಟ್ಟ ಸುಧಾರಣೆ ಶಾಖೆಯಿಂದ ಅನುಮೋದನೆಗೊಂಡಿರುವುದರಿಂದ ಈ ಹಿಂದೆ ಅನುಮೋದನೆ ನೀಡಲಾಗಿದ್ದ 2000ಕೆವಿಎ ವಿದ್ಯುತ್ ಸಂಪರ್ಕವನ್ನು 220/66/11 ಕೆವಿ ವಸಂತನರಸಾಪುರ ವಿದ್ಯುತ್ ಕೇಂದ್ರದ ಮೇಲೆ ಪ್ರತ್ಯೇಕವಾಗಿ ಹೊಸ ಮಾರ್ಗದ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕೋರಿಕೆ ಸಲ್ಲಿಸಿರುತ್ತೀರಿ.

ಈ ಸಂಬಂಧ, ತಮ್ಮ ಕಛೇರಿ ಕೋರಿಕೆ ಹಾಗೂ ಈ ಕಛೇರಿ ಕೋರಿಕೆ ಉಲ್ಲೇಖ ಪತ್ರ-(14) ರ ಕೋರಿಕೆ ಮೇರೆಗೆ ಉಲ್ಲೇಖ ಪತ್ರ-(15) ರಲ್ಲಿ 2000ಕೆವಿಎ ವಿದ್ಯುತ್ ಸಂಪರ್ಕವನ್ನು 220/66/11 ಕೆವಿ ವಸಂತನರಸಾಪುರ ವಿದ್ಯುತ್ ಕೇಂದ್ರದ ಮೇಲೆ ಪ್ರತ್ಯೇಕವಾಗಿ ಹೊಸ ಮಾರ್ಗದ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಮುಖ್ಯ ಇಂಜಿನಿಯರ್(ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರು ಈ ಕೆಳಕಂಡ ನಿಬಂಧನೆಗೊಳಪಟ್ಟು ಅನುಮೋದನೆ ನೀಡಿರುತ್ತಾರೆ. ಆದುದರಿಂದ ಸದರಿ ಅನುಮೋದನೆ ನೀಡಿರುವ ಪ್ರಸ್ತಾವನೆಯನ್ನು ಈ ಮೂಲಕ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ನಿಬಂಧನೆಗಳು:-

1. ಹಾಲಿ ಇರುವ 2000 ಕೆವಿಎ ಗೆ ಹೊಸದಾಗಿ ಕರಾರು ಪತ್ರ ಪಡೆದು, ಸಮಾಪನ ವರದಿ, ವೈರಿಂಗ್ ನಕಾಶೆ ಇತ್ಯಾದಿಗಳನ್ನು ಬೆವಿಕಂ ನಿಯಮಾನುಸಾರ ಸಲ್ಲಿಸತಕ್ಕದ್ದು.
2. ಹೊರೆಗೆ ತಕ್ಕಂತೆ ಸೂಕ್ತ ಅನುಪಾತದ ಸಿಟಿಯನ್ನು ಹೆಚ್.ಟಿ ಮೀಟರಿಂಗ್ ಕ್ಯೂಟಿಕಲ್ ನೊಂದಿಗೆ ಅಳವಡಿಸುವುದು.
3. ಹೊರೆಗೆ ತಕ್ಕಂತೆ ನಿಯಮಾನುಸಾರ ಎಲ್ಲಾ ಶುಲ್ಕಗಳನ್ನು ಬೆಸ್ಕಾಂ ಕಛೇರಿಯಲ್ಲಿ ಭರಿಸಿಕೊಳ್ಳತಕ್ಕದ್ದು.
4. ಸಂಬಂಧಿಸಿದ ಬೆವಿಕಂನ ಎಂ.ಟಿ. ಸಿಬ್ಬಂದಿ ರವರು ಮೀಟರ್‌ಗಳ ಪೂರ್ವ ಚಾಲನಾ ಪರಿವೀಕ್ಷಣೆ / ತಪಾಸಣೆಯನ್ನು ನಡೆಸುವುದು.
5. ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಅನುಮೋದನೆ ಇರುವ ಕುರಿತು ಖಚಿತಪಡಿಸಿಕೊಳ್ಳುವುದು..
6. ಲೆಕ್ಕ ಶಾಖೆಯಿಂದ ಸದರಿ ಸ್ಥಾವರದ ಮೇಲೆ ಯಾವುದೇ ಬಾಕಿ ಇಲ್ಲದಿರುವ ಬಗ್ಗೆ ಖಾತರಿಪಡಿಸಿಕೊಂಡು ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸುವುದು.
7. ನಿಗಮ ಕಾರ್ಯಾಲಯದ ಪತ್ರ ಸಂಖ್ಯೆ : ಪ್ರವ್ಯ(ಗುಪ್ರ&ಸು)/ಉಪ್ರವ್ಯ-3/ಬಿಸಿ-11/19-20/ಸಿವೈಎಸ್-12/29.04.2019 ಪ್ರಕಾರ ಪ್ರತಿ ಗ್ರಾಹಕರು ವಿದ್ಯುತ್ ಪರಿವರ್ತಕ, ಆರ್.ಎಮ್.ಯು, ಭೂಗತ ಕೇಬಲ್, ಎ.ಬಿ ಕೇಬಲ್, ಇನ್ಸುಲೇಟರ್, ಜಿ.ಓ.ಎಸ್ ಮತ್ತು ಸಿ.ಎಸ್.ಎಸ್ ಗಳಿಗೆ ಐದು ವರ್ಷದವರೆಗೆ ಖಾತರಿ (ಗ್ಯಾರಂಟಿ) ನೀಡತಕ್ಕದ್ದು ಹಾಗೂ ಈ ಸಾಮಗ್ರಿಗಳನ್ನು ಹೊರತು ಪಡಿಸಿ ಇನ್ನಿತರೆ ಸಾಮಗ್ರಿಗಳಿಗೆ ಸಂಪರ್ಕಿತ ದಿನಾಂಕದಿಂದ ಒಂದು ವರ್ಷದವರೆಗೆ ಖಾತರಿ (ಗ್ಯಾರಂಟಿ) ನೀಡತಕ್ಕದ್ದು.
8. ಕಾಲ ಕಾಲಕ್ಕೆ ಕರ್ನಾಟಕ ವಿದ್ಯುತ್ಚ್ಛಕ್ತಿ ನಿಯಂತ್ರಣ ಆಯೋಗದಿಂದ ಹೊರಡಿಸಲಾಗುವ ನೀತಿ-ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
9. ಕಾಮಗಾರಿ ನಿರ್ವಸಹಿಸುವ ವೇಳೆಯಲ್ಲಿ ಉಂಟಾಗಬಹುದಾದ ಯಾವುದೇ ಕಾನೂನಾತ್ಮಕ ತೊಡಕುಗಳಿಗೆ ಬೆಸ್ಕಾಂ ಜವಾಬ್ದಾರವಾಗುವದಿಲ್ಲ. ಒಂದು ವೇಳೆ ಉಂಟಾದಲ್ಲಿ ಯಾವುದೇ ತೊಡಕುಗಳಿಗೆ ಅರ್ಜಿದಾರರೇ ಹೊಣೆಗಾರರಾಗುತ್ತಾರೆ.

10. ಅಂದಾಜುಪಟ್ಟಿಯ ಶುಲ್ಕಗಳಲ್ಲಿ ಉಂಟಾಗಬಹುದಾದ ಯಾವುದೇ ವ್ಯತ್ಯಾಸದ ಬಾಬ್ತನ್ನು ಅರ್ಜಿದಾರರೇ ಬೆಸ್ಕಾಂಗೆ ಭರಿಸಬೇಕಾಗುತ್ತದೆ.
11. ಈ ಕಾಮಗಾರಿಗಾಗಿ ಈ ಕಛೇರಿಯಿಂದ ಕಂಪನಿಯ ಯಾವುದೇ ಲೆಕ್ಕ ಶೀರ್ಷಿಕೆಯಲ್ಲಿ, ಯಾವುದೇ ಕಾರ್ಯಾದೇಶ ನೀಡಿರುವುದಿಲ್ಲ.
12. ಕಳಚಿರುವ ಸಾಮಗ್ರಿಗಳನ್ನು (As per 7th schedule) ನಿಯಮಾನುಸಾರ De-commission ಅಂದಾಜುಪಟ್ಟಿಯನ್ನು ತಯಾರಿಸಿ. "As is where is basis" ನಲ್ಲಿ ಸಂಬಂಧಿಸಿದ ವಿಭಾಗೀಯ ಉಗ್ರಾಣಕ್ಕೆ ಹಿಂದಿರುಗಿಸಲು ಕ್ರಮ ಕೈಗೊಳ್ಳುವುದು.

ತತ್ಸಂಬಂಧ, ವಲಯ ಕಛೇರಿಯಿಂದ ತಾಂತ್ರಿಕ ಅನುಮೋದನೆ ನೀಡಿರುವ ಪ್ರತಿಯನ್ನು ಲಗತ್ತಿಸಿ, ತಮ್ಮ ಕಛೇರಿಯ ಮುಂದಿನ ಅಗತ್ಯ ಕ್ರಮಕ್ಕಾಗಿ ಸಂಪೂರ್ಣ ಕಡತವನ್ನು ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಅಧೀಕ್ಷಕ ಇಂಜಿನಿಯರ್ (ವ್ಯ.ಕಾ&ಪಾ),
ವೃತ್ತ ಕಛೇರಿ, ಬೆ.ವಿ.ಕಂ, ತುಮಕೂರು

ಪ್ರತಿಯನ್ನು :

1) ಮುಖ್ಯ ಇಂಜಿನಿಯರ್ (ವಿ), ಬೆವಿಕಂ, ಚಿತ್ರದುರ್ಗ ವಲಯ, ಚಿತ್ರದುರ್ಗ ರವರ ಕೃಪಾವಗಾಹನೆಗಾಗಿ.
2) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೆವಿಕಂ, ಗ್ರಾಮೀಣ ಉಪವಿಭಾಗ-1, ತುಮಕೂರು ರವರ ಮಾಹಿತಿಗಾಗಿ.
3) ಟಿ1/ಮುಕ.